ಕರ್ನಾಟಕ ವಿಧಾನ ಸಭೆ ಸಂಶೋಧನಾ ಮತ್ತು ಉಲ್ಲೇಖನ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 27/12/2019

# ಅತ್ಯುತ್ತಮ ಆಡಳಿತ ಸೂಚ್ಯಂಕ: ರಾಜ್ಯಕ್ಕೆ 3ನೇ ಸ್ಥಾನ

**ನವದೆಹಲಿ:** ಕೇಂದ್ರ ಸರ್ಕಾರ ಪ್ರಕಟ ಮಾಡಿದ ಅತ್ಯುತ್ತಮ ಆಡಳಿತ ಸೂಚ್ಯಂಕದಲ್ಲಿ ಕರ್ನಾಟಕ 3ನೇ ಸ್ಥಾನ ಪಡೆದುಕೊಂಡಿದೆ. ನೆರೆಯ ತಮಿಳುನಾಡಿಗೆ ಅಗ್ರಸ್ಥಾನ ಹೋಗಿದ್ದರೆ, ಮಹಾರಾಷ್ಟ್ರ ದ್ವಿತೀಯ ಸ್ಥಾನ ಪಡೆದಿದೆ. ಗಮನಾರ್ಹ ಸಂಗತಿಯೆಂದರೆ ಆರ್ಥಿಕ ಆಡಳಿತದಲ್ಲಿ ರಾಜ್ಯ ದೇಶದಲ್ಲೇ ನಂ.1 ಎನಿಸಿಕೊಂಡಿದೆ.

ಅತ್ಯುತ್ತಮ ಆಡಳಿತಕ್ಕೆ ಇನ್ನೂ ನಿರ್ದಿಷ್ಟ ಮಾನದಂಡಗಳನ್ನು ನಿರ್ಧರಿಸಿಲ್ಲ, ಈ ಬಗ್ಗೆ ಸಂವಾದ ನಡೆಯುತ್ತಿದೆ. ಸದ್ಯ ಬಿಡುಗಡೆಯಾಗಿರುವ ಸೂಚ್ಯಂಕದಲ್ಲಿ ಸಾರ್ವಜನಿಕ ಮೂಲಭೂತ ಸೌಕರ್ಯ, ಕುಡಿಯುವ ನೀರಿನ ಸೌಲಭ್ಯ, ಬಹಿರ್ದೆಸೆ ಮುಕ್ತ ನಗರ, ಗ್ರಾಮೀಣ ಭಾಗಗಳಿಗೆ ಸಂಪರ್ಕ ವ್ಯವಸ್ಥೆ, ಅಡುಗೆ ಅನಿಲ ಪೂರೈಕೆ, ನ್ಯಾಯವ್ಯವಸ್ಥೆ, ಸಾರ್ವಜನಿಕ ಭದ್ರತೆ ಇದನ್ನೆಲ್ಲ ಪರಿಗಣಿಸಲಾಗಿದೆ. ಈ ಲೆಕ್ಕಾಚಾರದಲ್ಲಿ ನೆರೆಯ ತಮಿಳುನಾಡು ಅಗ್ರಸ್ಥಾನ ಪಡೆದಿರುವುದು ಗಮನಾರ್ಹವಾಗಿದೆ. ಮಹಿಳಾ ಸುರಕ್ಷತೆ, ಪೊಲೀಸ್ ಸಿಬ್ಬಂದಿಯ ಲಭ್ಯತೆ, ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪೊಲೀಸರ ಅನುಪಾತ ಇವೂ ಕೂಡ ಗಣನೆಗೆ ಬಂದಿದೆ.

**ಗುಜರಾತ್‌ಗೆ 7ನೇ ಸ್ಥಾನ:** ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿದ್ದಾಗ ದೇಶದಲ್ಲೇ ಮಾದರಿ ರಾಜ್ಯ ಎನಿಸಿಕೊಂಡಿದ್ದ ಗುಜರಾತ್, ಪ್ರಸ್ತುತ ಉತ್ತಮ ಆಡಳಿತದಲ್ಲಿ ಆರನೇ ಸ್ಥಾನದಲ್ಲಿದೆ. ಮಮತಾ ಬ್ಯಾನರ್ಜಿ ಆಡಳಿತದ ಪ.ಬಂಗಾಳ 10ನೇ ಸ್ಥಾನ ಹೊಂದಿದೆ. ವಾಣಿಜ್ಯ ಮತ್ತು ಕೈಗಾರಿಕೆ, ಕೃಷಿ, ಆರ್ಥಿಕ ನಿರ್ವಹಣೆ ಎಂಬ ಹಲವು ಉಪವಿಭಾಗಗಳನ್ನೂ ಈ ಸೂಚ್ಯಂಕದಲ್ಲಿ ಮಾಡಲಾಗಿದ್ದು ಕರ್ನಾಟಕದಲ್ಲಿ ಆರ್ಥಿಕ ಆಡಳಿತದಲ್ಲಿ ದೇಶದಲ್ಲಿ ಅತ್ಯುತ್ತಮ ಸ್ಥಾನ ಗಳಿಸಿದೆ.